**ಸಾಕ್ಷಿಯನ್ನು ದಿನಾಂಕಃ 11-09-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ 4 ನೇ ಪ್ರತಿವಾದ ಪರ ಶ್ರೀ.ಎಂ.ಎ.ಎನ್ ವಕೀಲರವರಿಂದಃ**

ನಮ್ಮ ತಂದೆಗೆ ನಾವು 5 ಜನ ಮಕ್ಕಳು ಅವರೆಂದರೆ ನಾನು, ಶೇಕಮ್ಮ, ಪ್ರೇಮಕ್ಕ, ಸಾವಿತ್ರಮ್ಮ, ರಾಜಪ್ಪ, ನಾಗರಾಜ. ನನ್ನ ತಂದೆಗೆ ಒಬ್ಬ ಸಹೋದರ ಮಾತ್ರ ಇದ್ದು ಸಹೋದರಿಯರು ಇರುವುದಿಲ್ಲ ನನ್ನ ತಂದೆ ಹೆಸರು ನಿಂಗಪ್ಪ ಇರುವುದು. ನನ್ನ ತಂದೆಯ ಸಹೋದರನ ಹೆಸರು ರುದ್ರಪ್ಪ. ನನ್ನ ತಂದೆ ಹಾಗೂ ಅವರ ಸಹೊದರನಾದ ರುದ್ರಪ್ಪ ಇವರ ನಡುವೆ ಯಾವುದೇ ಪಾಲು ಪಟ್ಟಿ ಅಗಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ ಅವರ ಸಹೋದರು ಕೂಡಿ ಇದ್ದಾಗ 4 ಎಕರೆ 78 ಸೆನ್ಸ ಜಮೀನು ಇತ್ತು. ರುದ್ರಪ್ಪ ಈಗಾಲೂ ಜೀವಂತ ಇರುವರು. ರುದ್ರಪ್ಪನನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

2. 1 ನೇ ದಾವಾ ಅಸ್ತಿಯು ಪಿತ್ರಾರ್ಜಿತ ಅಸ್ತಿ ಅಗಿರುತ್ತದೆ. ಅದು ಈಗ ನಮ್ಮ ಅಂದರೆ ನನ್ನ, ನಾಗರಾಜ ಹಾಗೂ ನನ್ನ ತಂದೆಯ ಸ್ವಾಧೀನದಲ್ಲಿ ಇರುತ್ತದೆ. ದಾವೆ ಹಾಕುವ ಕಾಲಕ್ಕೆ 1 ನೇ ದಾವಾ ಅಸ್ತಿಯ ಪಹಣಿ ನಾಗರಾಜನ ಹೆಸರಿನಲ್ಲಿತ್ತು. ಸದರಿ ಪಹಣಿಯನ್ನು ನಾನು ಹಾಜರು ಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ರುದ್ರಪ್ಪ ಯಾರ ಹೆಸರಿಗೆ ತನ್ನ ಜಮೀನನ್ನು ಮಾರಾಟ ಮಾಡಿರುವರು ಅಂದರೆ ಆತ ಮಾರಾಟ ಮಾಡಿರುವುದಿಲ್ಲ. ರುದ್ರಪ್ಪನು 3 ನೇ ಪ್ರತಿವಾದಿಯಾದ ಮಂಜಪ್ಪನಿಗೆ 1 ನೇ ದಾವಾ ಅಸ್ತಿಯನ್ನು ಮಾರಾಟ ಮಾಡಿರುವನು ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ನಾಗರಾಜನು ಅಂದರೆ 2 ನೇ ಪ್ರತಿವಾದಿ 3 ನೇ ಪ್ರತಿವಾದಿಯಾದ ಮಂಜಯ್ಯನಿಗೆ ಮಾರಾಟ ಮಾಡಿರುವನು ಎಂದು ನುಡಿದರು.

ಸಾಕ್ಷಿಯ ಸಹಿ 11.09.2025

3. ಸದರಿ ಮಂಜಯ್ಯನು 4 ನೇ ಪ್ರತಿವಾದಿಯಾದ ರಮೇಶ ಇವರಿಗೆ ನೊಂದಾಯಿತ ಖರೀದಿ ಪತ್ರದ ಮುಖಾಂತರ ಮಾರಾಟ ಮಾಡಿರುವರು ಅಂದರೆ ಸರಿಯಲ್ಲ. ಆ ಬಗ್ಗೆ ಪಹಣಿ ರಮೇಶನ ಹೆಸರಿಗೆ ದಾಖಲಾಗಿದೆ ಅಂದರೆ ಸರಿಯಲ್ಲ. 1 ನೇ ದಾವಾ ಅಸ್ತಿಯು 4 ನೇಪ್ರತಿವಾದಿಯ ಸ್ವಾಧೀನ ಅನುಭವದಲ್ಲಿ ಇರುತ್ತದೆ ಅಂದರೆ ಸರಿಯಲ್ಲ. ಕುಟುಂಬದ ಅವಶ್ಯಕತೆಗಾಗಿ ರುದ್ರಪ್ಪ ಹಾಗೂ ನಾಗರಾಜ 1 ನೇ ದಾವಾ ಅಸ್ತಿಯನ್ನು ಮಾರಾಟ ಮಾಡಿರುವರು ಅಂದರೆ ಸರಿಯಲ್ಲ. ಆ ವಿಚಾರ ನನಗೆ ಗೊತ್ತಿದ್ದರೂ ರಮೇಶನಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಮತ್ತು ನನ್ನ ಕುಟುಂಬದ ಯಾವುದೇ ಸದಸ್ಯರಿಗೆ 1 ನೇ ದಾವಾ ಅಸ್ತಿಯಲ್ಲಿ ಯಾವುದೇ ಹಕ್ಕು ಅಧಿಕಾರ ಹಿತಾಸಕ್ತಿ ಇರುವುದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

11-09-2025
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 11.09.2025